॥ಶ್ರೀ ಚಂಪಕಾಪುರೀ ಶ್ರೀನಿವಾಸಾಷ್ಟಕಂ ॥

ಶೌಭ್ರರಾಜ ರಾಜರಾಜ ಕಂಜಯೋನಿ ವಂದಿತಂ।
ನಿತ್ಯಭಕ್ತ ಪೂಜಿತಂ ಸುಧನ್ವಪೂಜಕಾಂಚಿತಂ।
ಕಂಜಚಕ್ರ ಕೌಸ್ತುಭೈಃ ವಿರಾಜಿತಂ ಗದಾಧರಂ।
ಚಂಪಕಾಪುರೀ ನಿವಾಸಮಾನಿವಾಸಮಾಶ್ರಯೇ ॥ 1 ॥

ಅರ್ಥ=ಸಾರ್ವಭೌಮನಾದ ಹರಿಶ್ಚಂದ್ರನಿಂದಲೂ, ಕುಬೇರನಿಂದಲೂ, ಚತುರ್ಮುಖ ಬ್ರಹ್ಮನಿಂದಲೂ ವಂದಿಸಲ್ಪಟ್ಟವನೂ, ನಿತ್ಯಸೂರಿಗಳಿಂದಲೂ ಪೂಜೆಗೊಳ್ಳುತ್ತಿರುವವನೂ, ಸುಧನ್ವಮಹಾರಾಜನಿಂದ ಪೂಜಾ ಕೈಂಕರ್ಯವನ್ನು ಕೊಂಡವನೂ, ಶಂಖ, ಚಕ್ರ, ಗದೆ ಮತ್ತು ಕೌಸ್ತುಭ ಇತ್ಯಾದಿಗಳನ್ನು ಧರಿಸಿರುವವನೂ ಆದಂತಹ ಚಂಪಕಾಪುರಿ ಎಂಬ ಸಂಪಿಗೆ ಗ್ರಾಮದಲ್ಲಿ ನಿತ್ಯವಾಸಿಯಾಗಿರುವ ಆ ಶ್ರೀನಿವಾಸನನ್ನು ಶರಣುಹೊಂದಿ ಆಶ್ರಯಿಸುತ್ತೇನೆ.

ಪನ್ನಗಾರಿಯಾಯಿನಂ ಸುಪನ್ನಗೇಶ ಶಾಯಿನಂ।
ಪಂಕಜಾರಿ ಪಂಕಜೇಷ್ಟ ಲೋಚನಂ ಚತುರ್ಭುಜಂ।
ಪಂಕಜಾತ ಶೋಷಕಂ ವಿಪಂಕಜಾತ ಪೋಷಕಂ।
ಚಂಪಕಾಪುರೀ ನಿವಾಸಮಾನಿವಾಸಮಾಶ್ರಯೇ ॥ 2 ॥

ಅರ್ಥ= ನಿತ್ಯಸೂರಿಗಳಲ್ಲಿ ಪ್ರಮುಖರಾದ ಗರುಡನನ್ನೇ ವಾಹನವಾಗಿ ಉಳ್ಳ, ಆದಿಶೇಷನನ್ನೇ ಹಾಸಿಗೆಯಾಗಿ ಉಳ್ಳ, ಸೂರ್ಯ ಚಂದ್ರರುಗಳನ್ನೇ ಎರಡು ದಿವ್ಯನೇತ್ರಗಳನ್ನಾಗಿ ಉಳ್ಳ, ಚತುರ್ಭುಜನಾದ, ಪಾಪಗಳನ್ನು ತೊಲಗಿಸುವವನೂ, ಪುಣ್ಯಗಳನ್ನು ಪೋಷಿಸುವವನೂ ಆದ ಚಂಪಕಾಪುರಿ ಎಂಬ ಸಂಪಿಗೆ ಗ್ರಾಮದಲ್ಲಿ ನಿತ್ಯವಾಸಿಯಾಗಿರುವ ಆ ಶ್ರೀನಿವಾಸನನ್ನು ಶರಣುಹೊಂದಿ ಆಶ್ರಯಿಸುತ್ತೇನೆ.

ದಕ್ಷಶಿಕ್ಷ ಕಚ್ಛಿದಂ ಕುಹಾಟಕಾಕ್ಷ ಸಂಭಿದಂ।
ಯಕ್ಷಗೀತ ಸೇವಿತಂ ಸುರಕ್ಷಣೈಕ ದೀಕ್ಷಿತಂ।
ಅಕ್ಷಜಾತಮಾರಕಂ ಕಟಾಕ್ಷದೃಷ್ಟಿ ತಾರಕಂ।
ಚಂಪಕಾಪುರೀ ನಿವಾಸಮಾನಿವಾಸಮಾಶ್ರಯೇ ॥ 3 ॥

ಅರ್ಥ= ದಕ್ಷ ಪ್ರಜಾಪತಿಗೆ ಶಿಕ್ಷಿಸಿದವನೂ, ಯಕ್ಷರುಗಳ ಗಾಯನಕ್ಕೆ ಮಾರುಹೋದವನೂ, ಜಗದ್ರಕ್ಷಣೆಯನ್ನೇ ದೀಕ್ಷೆಯಾಗಿ ಉಳ್ಳ ಸತ್ಸಂಕಲ್ಪನೂ, ವಜ್ರಾಯುಧವೆಂಬ ಆಯುಧದಿಂದ ದುಷ್ಟರನ್ನು ಸಂಹರಿಸುವವನೂ, ತನ್ನ ಕೃಪಾ ಕಟಾಕ್ಷದಿಂದಲೇ ಸದ್ಭಕ್ತರಿಗೆ ಸಂಸಾರ ಸಮುದ್ರವನ್ನು ದಾಟಿಸುವವನೂ ಆದ ಚಂಪಕಾಪುರಿ ಎಂಬ ಸಂಪಿಗೆ ಗ್ರಾಮದಲ್ಲಿ ನಿತ್ಯವಾಸಿಯಾಗಿರುವ ಆ ಶ್ರೀನಿವಾಸನನ್ನು ಶರಣುಹೊಂದಿ ಆಶ್ರಯಿಸುತ್ತೇನೆ.

ನಾರದಾದಿ ವಂದಿತಂ ನೃನಾರ ಶೈಲ ಭಂಜಿತಂ।
ನಾರ ಸದ್ಮವಾಸ ಜಾತ ನಾರಪೂರ್ವಕಾಯನಂ।
ನಾರತಲ್ಲಜಾಯನಂ ಕುನಾರಕಾಂತಕಾಲಯಂ।
ಚಂಪಕಾಪುರೀ ನಿವಾಸಮಾನಿವಾಸಮಾಶ್ರಯೇ ॥ 4 ॥

ಅರ್ಥ= ನಾರದರೇ ಮೊದಲಾದ ಋಷಿ ಮುನಿಗಳಿಂದ ವಂದಿಸಲ್ಪಟ್ಟವನೂ, ಶ್ರೇಷ್ಠವಾದ ವೈಕುಂಠವನ್ನೇ ತನ್ನ ಆಲಯವನ್ನಾಗಿ ಉಳ್ಳವನೂ, ಭಕ್ತಜನ ಸಮೂಹದಿಂದ ಭಜಿಸಲ್ಪಡುವವನೂ, ಸ್ತೋತ್ರ ಮಾಡಲ್ಪಡುವವನೂ, ಹಿಂದೆ ಕೃಷ್ಣಾವತಾರದಲ್ಲಿ ಗೋವುಗಳ ರಕ್ಷಣೆ ಮಾಡಿದವನೂ, ಹಿರಣ್ಯಕಶಿಪು ಹಿರಣ್ಯಾಕ್ಷ ಮೊದಲಾದ ದುಷ್ಟರಿಗೆ ಹಂತಕನೂ ಆದ ಚಂಪಕಾಪುರಿ ಎಂಬ ಸಂಪಿಗೆ ಗ್ರಾಮದಲ್ಲಿ ನಿತ್ಯವಾಸಿಯಾಗಿರುವ ಆ ಶ್ರೀನಿವಾಸನನ್ನು ಶರಣುಹೊಂದಿ ಆಶ್ರಯಿಸುತ್ತೇನೆ.

ಕಾಲಮೇಘ ವರ್ಣಕಂ ಪ್ರಕಾಮ ಮುಕ್ತಿದಾಯಕಂ।
ಕಾಲಕಾಲ ಕಾರಕಂ ಕುಕಾಲಪಾಲ ದೂರಕಂ।
ರತ್ನವರ್ಮ ರಾಜವರ್ಷ್ಮ ಭಾನುಬೃಂದ ಭಾಸ್ವರಂ।
ಚಂಪಕಾಪುರೀ ನಿವಾಸಮಾನಿವಾಸಮಾಶ್ರಯೇ ॥ 5 ॥

ಅರ್ಥ= ನೀಲಮೇಘವರ್ಣ ಶ್ಯಾಮಳನೂ, ಇಚ್ಛಿಸಿದವರಿಗೆ ಮುಕ್ತಿಯನ್ನು ನೀಡುವವನೂ, ಭೂತ, ಭವಿಷ್ಯತ್, ವರ್ತಮಾನಗಳೆಂಬ ತ್ರಿಕಾಲಕಾರಕನೂ, ಯಮಪಾಶವನ್ನು ದೂರಮಾಡುವವನೂ ರತ್ನವರ್ಮ, ರಾಜವರ್ಮ ಇತ್ಯಾದಿ ಸದ್ ಭೂಪಾಲಕರಿಂದ ಕೈಂಕರ್ಯಗೊಂಡವನೂ, ಭಾನುವೇ ಮೊದಲಾದ ಗ್ರಹಗಳಿಂದಲೂ ಪೂಜೆಗೊಂಡು ಕಂಗೊಳಿಸುತ್ತಿರುವವನೂ ಆದ ಚಂಪಕಾಪುರಿ ಎಂಬ ಸಂಪಿಗೆ ಗ್ರಾಮದಲ್ಲಿ ನಿತ್ಯವಾಸಿಯಾಗಿರುವ ಆ ಶ್ರೀನಿವಾಸನನ್ನು ಶರಣುಹೊಂದಿ ಆಶ್ರಯಿಸುತ್ತೇನೆ.

ಸ್ವರ್ಣಸೂತ್ರ ಗುಂಭಿತೋರು ಸಾಲಿಕಾಶ್ಮ ಮಾಲಿಕಂ।
ರತ್ನ ರತ್ನ ರಂಜಿತಂ ಗದಾಂಚಿತಂ ಕೃಪಾಕರಂ।
ಪ್ರಜ್ವಲತ್ ಕಿರೀಟಿನಂ ಪ್ರವಿಸ್ಫುರತ್ ಸುಪುಂಡ್ರಕಂ।
ಚಂಪಕಾಪುರೀ ನಿವಾಸಮಾನಿವಾಸಮಾಶ್ರಯೇ ॥ 6 ॥

ಅರ್ಥ=ಸ್ವರ್ಣಮಯವಾದ ಯಜ್ಞೋಪವೀತ ಧಾರಿಯೂ, ಗಾಂಭೀರ್ಯವಾದ ತೊಡೆಗಳನ್ನು ಹೊಂದಿ ಶೋಭಿಸುತ್ತಿರುವವನೂ, ಸಾಲಿಗ್ರಾಮ ಮಾಲೆಯನ್ನು ಧರಿಸಿ ಅದರಿಂದ ಕಾಂತಿಹೊಂದಿರುವವನೂ, ವಿವಿಧ ರತ್ನಗಳಿಂದ ಅಲಂಕರಿಸಲ್ಪಟ್ಟವನೂ, ಗದಾಧರನೂ, ಕೃಪಾಕರನೂ, ಕಿರೀಟದ ಹೊಳಪಿನಿಂದ ಪ್ರಕಾಶಮಾನನೂ, ಆಕರ್ಷಕವಾದ ಊರ್ಧ್ವಪುಂಡ್ರಧಾರಿಯೂ ಆದ ಚಂಪಕಾಪುರಿ ಎಂಬ ಸಂಪಿಗೆ ಗ್ರಾಮದಲ್ಲಿ ನಿತ್ಯವಾಸಿಯಾಗಿರುವ ಆ ಶ್ರೀನಿವಾಸನನ್ನು ಶರಣುಹೊಂದಿ ಆಶ್ರಯಿಸುತ್ತೇನೆ.

ವಕ್ತ್ರಕಾಂತಿ ವಂಚಿತೋರು ಶಾರದೇಂದು ಮಂಡಲಂ।
ಕುಂದ ದನ್ತಮಿಂದಿರೇಶ ಮಕ್ಷರಂ ನಿರಾಮಯಂ।
ಮಂದಹಾಸ ಶುಭ್ರತಾಶ ಕಿಂಕಿಣೀಲಸತ್ಕಟಿಂ।
ಚಂಪಕಾಪುರೀ ನಿವಾಸಮಾನಿವಾಸಮಾಶ್ರಯೇ ॥ 7 ॥

ಅರ್ಥ=ದಿವ್ಯವಾದ ಮುಖಕಾಂತಿಯಿಂದ ಕೂಡಿದ, ಹೊಳೆಯುವ ಊರುದ್ವಯಗಳನ್ನು ಹೊಂದಿದ, ಶರತ್‌ಕಾಲದ ಚಂದ್ರನಂತೆ ನಿರ್ಮಲವಾದ ಕಾಂತಿಯಿಂದ ಕೂಡಿದ, ಕುಬೇರನ ಎಲ್ಲಾ ಐಶ್ವರ್ಯಗಳಿಗೂ ಒಡೆಯನಾದ, ಅಕ್ಷರನೂ, ನಿರಾಮಯನೂ ಆದ, ಮಂದಹಾಸಿಯೂ, ಸತ್ ಸಂಕಲ್ಪನೂ, ಸೊಂಕಟದಲ್ಲಿ ನೂಪುರಾದಿ ಅಲಂಕಾರಗಳನ್ನು ಧರಿಸಿರುವವನೂ ಆದ ಚಂಪಕಾಪುರಿ ಎಂಬ ಸಂಪಿಗೆ ಗ್ರಾಮದಲ್ಲಿ ನಿತ್ಯವಾಸಿಯಾಗಿರುವ ಆ ಶ್ರೀನಿವಾಸನನ್ನು ಶರಣುಹೊಂದಿ ಆಶ್ರಯಿಸುತ್ತೇನೆ.

ಸರ್ವಲೋಕ ನಾಯಕಂ ಸುವಾಂಛಿತಾರ್ಥ ದಾಯಕಂ।
ಶರ್ವಚಾಪ ಭಂಜಕಂ ಸಗರ್ವ ರಾವಣಾಂತಕಂ।
ಪೀತಚೇಲ ಧಾರಕಂ ಕುಚೇಲ ರಿಕ್ತ ನಾಶಕಂ।
ಚಂಪಕಾಪುರೀ ನಿವಾಸಮಾನಿವಾಸಮಾಶ್ರಯೇ ॥ 8 ॥

ಅರ್ಥ= ಜಗತ್ತಿಗೆಲ್ಲಾ ಒಡೆಯನೂ, ಬೇಡಿದ್ದನ್ನು ಕರುಣಿಸುವವನೂ, ರಾಮಾವತಾರದಲ್ಲಿ ಶಿವಧನಸ್ಸನ್ನು ಮುರಿದಂತಹ ಪರಾಕ್ರಮಿಯೂ, ಗರ್ವದಿಂದ ಕೂಡಿದ ರಾಕ್ಷಸನಾದ ರಾವಣನನ್ನು ಸಂಹರಿಸಿದವನೂ, ಶುಭ್ರವಾಗಿರುವ ವಸತ್ರಧಾರಿಯೂ, ಕೃಷ್ಣಾವತಾರದಲ್ಲಿ ಕುಚೇಲನ ದಾರಿದ್ರ್ಯವನ್ನು ನಾಶಗೊಳಿಸಿದವನೂ ಆಗಿ ಈಗ ಅರ್ಚಾಸ್ವರೂಪಿಯಾಗಿ ಚಂಪಕಾಪುರಿ ಎಂಬ ಸಂಪಿಗೆ ಗ್ರಾಮದಲ್ಲಿ ನಿತ್ಯವಾಸಿಯಾಗಿರುವ ಆ ಶ್ರೀನಿವಾಸನನ್ನು ಶರಣುಹೊಂದಿ ಆಶ್ರಯಿಸುತ್ತೇನೆ.

॥ಫಲಶ್ರುತಿ॥

ಅಷ್ಟಕಂ ರಮಾಪತೇಃ ಭವಾಬ್ಧಿಶೋಕ ಶೋಷಕಂ।
ಸರ್ವಪಾಪ ನಾಶಕಂ ಸುಪುತ್ರಪೌತ್ರ ದಾಯಕಂ।
ಯೇ ಪಠಂತಿ ಭಕ್ತಿತಃ ಪ್ರಯಾಂತಿ ತೇತು ಸರ್ವದಾ।
ಚಂಪಕಾಪುರೀ ನಿವಾಸಮಾನಿವಾಸ ಸನ್ನಿಧಿಂ ॥ 9 ॥

ಅರ್ಥ= ಈ ಮೇಲೆ ಹೇಳಿದ ಎಂಟು ಶ್ಲೋಕಗಳಿಂದ ಕೂಡಿದ ಚಂಪಕಾಪುರೀಶನಾದ ಶ್ರೀನಿವಾಸನ ಅಷ್ಟಕವನ್ನು ಯಾವ ಭಕ್ತನು ಪ್ರತಿದಿನ ಭಕ್ತಿಯಿಂದ ಪಠಿಸುತ್ತಾರೋ, ಅಂತಹವನಿಗೆ ಸಂಸಾರ ಸಾಗರವೆಂಬ ಕಷ್ಟದಿಂದ ಉಂಟಾದ ಶೋಕನಾಶವೂ ಕ್ಷಣಾರ್ಧದಲ್ಲಿ ಉಂಟಾಗಿ, ಪೂರ್ವಜನ್ಮದ ಎಲ್ಲಾ ಪಾಪಗಳ ನಾಶವೂ, ಸತ್ ಸಂತಾನಪ್ರಾಪ್ತಿಯೂ ಉಂಟಾಗಿ ಆ ಸಾಕ್ಷಾತ್ ಶ್ರೀನಿವಾಸನ ಸಾಯುಜ್ಯ ಸನ್ನಿಧಿಯನ್ನೇ ಆ ಭಕ್ತನು ಹೊಂದುತ್ತಾನೆ. ಇದರಲ್ಲಿ ಯಾವುದೇ ಸಂಶಯವಿಲ್ಲ.

***